<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>

## <u>ಸಿ.ಸಿ. ನಂ. 2126/2021</u>

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ರಾಧಮ್ಮ | ಸಿಡಬ್ಲ್ಯು -2 |
| ತಂದೆ/ ಗಂಡನ ಹೆಸರು | : | ಚನ್ನಯ್ಯ | ಪಿ ಡಬ್ಲ್ಯು-2 |
| ವಯಸ್ಸು | : | 25 ವರ್ಷ | |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ವರವು ಗ್ರಾಮ | ದಿಃ12-03-2025. |

<u>ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ</u>

ಮೃತ ಚನ್ನಯ್ಯ ನನ್ನ ಗಂಡ. ನನ್ನ ಗಂಡನಿಗೆ ಈಗ್ಗೆ 5 ವರ್ಷಗಳ ಹಿಂದೆ ಚಳ್ಳಕೆರೆಯ ಬಿ ಎಂ ಬಿ ಎಚ್ ಎಸ್ ಶಾಲೆಯ ಹತ್ತಿರ ರಾತ್ರಿ ಸಮಯದಲ್ಲಿ ಒಂದು ಬೈಕ್ ಅಪಘಾತಪಡಿಸಿರುತ್ತದೆ. ಅಪಘಾತದಲ್ಲಿ ಚನ್ನಯ್ಯವರು ಗಾಯಗೊಂಡಿದ್ದು, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದುಕೊಂಡು ಹೋಗುವಾಗ ಮಾರ್ಗ ಮದ್ಯದಲ್ಲಿ ಮೃತಪಟ್ಟಿರುತ್ತಾರೆ.

ನಂತರ ಆಸ್ಪತ್ರೆಯಿಂದ ನನ್ನ ಗಂಡನ ಶವವನ್ನು ಪಡೆದು ಶವ ಸಂಸ್ಕಾರ ಮಾಡಿರುತ್ತೇವೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಅಥವಾ ಮರು ಹೇಳಿಕೆ ನೀಡಿಲ್ಲ. ನನ್ನ ಗಂಡಗೆ ಅಪಘಾಪಡಿಸಿದ ವಾಹನ ನಂಬರ ಹಾಗೂ ಚಾಲಕ ಯಾರು ಅಂತ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ.

ಸಾಕ್ಷಿಗೆ ಮುಂದುವರೆದ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮುಂದುವರೆದ ದೂರನ್ನು ನಿಪಿಃ4 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.4(ಎ)ಅಂತಾ ಗುರುತಿಸಲಾಯಿತು. ನಿಪಿಃ4 ಕ್ಕೆ ಈಗ್ಗೆ 5 ವರ್ಷಗಳ ಹಿಂದೆ ಪೊಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಮರು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ14-11-2019 ರಂದು ರಾತ್ರಿ ಬಿ.ಎಂ.ಜಿ.ಎಚ್.ಎಸ್ ಶಾಲೆಯ ಆವರಣದಲ್ಲಿ ಕುರುಕ್ಷೇತ್ರ ನಾಟಕ ಇದ್ದು ಅದನ್ನು ನಾನು ನೋಡಲು ಚಾಸಾ-1 ಮತ್ತು ನನ್ನ ಗಂಡ ಮೃತ ಚನ್ನಯ್ಯರವರು ರಾತ್ರಿ 8-35 ರ ಸಮಯದಲ್ಲಿ ಚಿತ್ರದುರ್ಗ ಚಳ್ಳಕೆರೆ ರಸ್ತೆಯನ್ನು ದಾಟುತ್ತಿದ್ದಾಗ ವಾಲ್ಮೀಕ್ ಸರ್ಕಲ್ ಕಡೆಯಿಂದ ಒಂದು ಬೈಕ್ ಕೆಎ-16-ಇಸಿ-8182 ಬೈಕ ಸವಾರನು ತನ್ನ ಬೈಕ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚನ್ನಯ್ಯ ಡಿಕ್ಕಿಪಡಿಸಿರುತ್ತಾನೆ ಎಂದು ತಿಳಿಯಿತು ಎಂದರೆ ಸರಿ. ನನ್ನ ಗಂಡ ಮೃತನಾದ ನಂತರ ದಿಃ16-11-2019 ರಂದು ಪೊಲೀಸ ಠಾಣೆಗೆ ಬಂದು ನಿಪಿಃ4 ರಂತೆ ಹೆಚ್ಚಿನ ದೂರು ನೀಡಿರುತ್ತೇನೆ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಆರೋಪಿ ಅಪಘಾತಪಡಿಸಿದ ಬೈಕ್ ಸವಾರ ಎಂದು ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿಃ5 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ಅಪಘಾತಪಡಿಸಿದ ಸವಾರ ಎಂದು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಸಿ ವಿ., ಆರೋಪಿಯ ಪರ ವಕೀಲರಿಂದಃ**

ಅಪಘಾತವನ್ನು ನಾನು ಖುದ್ದು ನೋಡಿಲ್ಲ ಎಂದರೆ ಸರಿ. ನಿಪಿಃ4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

## ಸಿ.ಸಿ. ನಂ. 2126/2021

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ಃ | ಕಾಟಯ್ಯ | ಸಿಡಬ್ಲ್ಯೂ -1 |
| ತಂದೆ/ ಗಂಡನ ಹೆಸರು | ಃ | ತಿಪ್ಪೇಸ್ವಾಮಿ | ಪಿ ಡಬ್ಲ್ಯೂ -1 |
| ವಯಸ್ಸು | ಃ | 53 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸಸ್ಥಳ | ಃ | ವರವು ಗ್ರಾಮ | ದಿಃ12-03-2025. |

**ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ**

ಮೃತ ಚನ್ನಯ್ಯ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ ಅಪಘಾತ ಹೇಗೆ ಮತ್ತು ಯಾರ ತಪ್ಪಿ ನಿಂದ ಆಯಿತು ಅಂತಾ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ಒಳಗೊಂಡ ವಾಹನಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡುತ್ತಿದ್ದು ಆತನ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ ಈ ಕುರಿತು ನಾನು ಪೋಲೀಸರಿಗೆ ಯಾವುದೇ ದೂರು ನೀಡಿಲ್ಲ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿಃ1 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.1(ಎ)ಅಂತಾ ಗುರುತಿಸಲಾಯಿತು. ನಿಪಿಃ1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿಃ2 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.2(ಎ)ಅಂತಾ ಗುರುತಿಸಲಾಯಿತು. ನಿಪಿಃ2 ಕ್ಕೆ 5-6 ವರ್ಷಗಳ ಹಿಂದೆ ಚಳ್ಳಕೆರೆಯ ಟೌನ್ ಪೊಲೀಸ ಠಾಣೆಯ ಮುಂಭಾಗ ಸಹಿ ಪಡೆದಿರುತ್ತಾರೆ. ನಿಪಿಃ2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆಗೆ ಚಾಸಾ-3 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ನೋಡಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಕುರಿತು ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿಃ14-11-2019 ರಂದು ರಾತ್ರಿ ಬಿ.ಎಂ.ಜಿ.ಎಚ್.ಎಸ್ ಶಾಲೆಯ ಆವರಣದಲ್ಲಿ ಕುರುಕ್ಷೇತ್ರ ನಾಟಕ ಇದ್ದು ಅದನ್ನು ನಾನು ನೋಡಲು ನಾನು ಮತ್ತು ನನ್ನ ಅಳಿಯ ಮೃತ ಚನ್ನಯ್ಯರವರು ರಾತ್ರಿ 8-35 ರ ಸಮಯದಲ್ಲಿ ಚಿತ್ರದುರ್ಗ ಚಳ್ಳಕೆರೆ ರಸ್ತೆಯನ್ನು ದಾಟುತ್ತಿದ್ದಾಗ ವಾಲ್ಮೀಕ್ ಸರ್ಕಲ್ ಕಡೆಯಿಂದ ಒಂದು ಬೈಕ್ ಕೆಎ-16-ಇಸಿ-8182 ಬೈಕ ಸವಾರನು ತನ್ನ ಬೈಕ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚನ್ನಯ್ಯ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಡಿಕ್ಕಿಪಡಿಸಿದ ಪರಿಣಾಮ ಚನ್ನಯ್ಯನಿಗೆ ತಲೆಯ ಹಿಂಭಾಗಕ್ಕೆ ಕಿವಿಯ ಹತ್ತಿರ ತೀವ್ರ ಸ್ವರೂಪದ ಪೆಟ್ಟು ಬಿದ್ದಿರುತ್ತವೆ ಎಂದರೆ ಸರಿಯಲ್ಲ. ನಂತರ ಗಾಯಾಳುವನುನ ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಚಿತ್ರದುರ್ಗಕ್ಕೆ ಕಳುಹಿಸಿಕೊಟ್ಟು ನಂತರ ಪೊಲೀಸ ಠಾಣೆಗೆ ಬಂದು ನಿಪಿಃ1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ15-11-2019 ರಂದು ಮಧ್ಯಾಹ್ನ 11-30 ರಿಂದ 11-45 ರವರೆಗೆ ಅಪಘಾತದ ಸ್ಥಳದಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ3 ಮತ್ತು 4 ರವರ ಸಮಕ್ಷಮ ನಿಪಿಃ2 ರಂತೆ ಸ್ಥಳ ಪಂಚನಾಮೆ ಜರುಗಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ17-11-2019 ರಂದು ಪೊಲೀಸ ಠಾಣೆಗೆ ನಾನು ಹೋಗಿ ಗಾಯಾಳು ಚನ್ನಯರವರು ಮೃತಪಟ್ಟಿರುತ್ತಾರೆ ಎಂದು ಹಾಗೂ ಪೊಲೀಸ ಠಾಣೆಯಲ್ಲಿ ಚನ್ನಯ್ಯನಿಗೆ ಅಪಘಾತಪಡಿಸಿದ ಬೈಕ್ ಸವಾರನ ಹೆಸರು ಹರೀಶ ಕುಮಾರ ಅಂತ ತಿಳಿಯಿತು ಎಂದು ಹಾಗೂ ಬೈಕ್ ಸವಾರ ಹಾಗೂ ಬೈಕ್ ನ್ನು ನೋಡಿದರೆ ಗುರುತಿಸುತೆತೀನೆ ಎಂದು ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಗಳೆದ ಹೇಳಿಕೆಯನ್ನು ನಿಪಿಃ3 ಅಂತ ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ಅಪಘಾತಪಡಿಸಿದ ಸವಾರ ಎಂದು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

### ಪಾಟೀ ಸವಾಲುಃ ಶ್ರೀ ಸಿ ವಿ., ಆರೋಪಿಯ ಪರ ವಕೀಲರಿಂದಃ

ಆರೋಪಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದ ಕಾರಣ ಸದರಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ